


## ಮ್ಯಾಗ್ನ 3 ಪಂಪ್‌ಸೆಟ್

ಗ್ರಂಡ್ಫೋಸ್ ಪಂಪ್ಸ್ ಇಂಡಿಯಾ ಪ್ರೈ ಲಿಮಿಟೆಡ್ ಕಂಪೆನಿ ಇದೀಗ ಹೊಸದಾಗಿ ಮ್ಯಾಗ್ನ 3 ಸರ್ಕ್ಯುಲೇಟರ್ ಪಂಪ್ ಸೆಟ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಅತ್ಯಂತ ಪರಿಣಾಮಕಾರಿಯಾದ ಮೋಟಾರ್ ಸೌಲಭ್ಯವುಳ್ಳ ಈ ಪಂಪ್ ಶೇ. 85ಕ್ಕೂ ಹೆಚ್ಚು ವಿದ್ಯುತ್ ಉಳಿತಾಯ ಮಾಡುವ ಸಾಮರ್ಥ್ಯ ಹೊಂದಿದೆ. ಅಲ್ಲದೆ ಆಟೋ ಅಡಾಪ್ಟ್ ವ್ಯವಸ್ಥೆ ಇರುವುದರಿಂದ ಇದು ಗ್ರಾಹಕರಿಗೆ ಹೆಚ್ಚು ಸಹಕಾರಿಯಾಗಲಿದೆ. ಎಲ್ಲಾ ಮಾದರಿಯ ಏರ್ ಕಂಡೀಷನ್ ಮತ್ತು ಕೂಲಿಂಗ್ ಸಿಸ್ಟಂ ಉತ್ಪನ್ನಗಳಿಗೆ ಇದು ಹೆಚ್ಚು ಉಪಯೋಗವಾಗಲಿದೆ.

ಶಬ್ದರಹಿತವಾಗಿ ಮತ್ತು ಮಿತ ವಿದ್ಯುತ್ ವ್ಯಯಿಸಿ ಹೆಚ್ಚಿನ ದೀರ್ಘಕಾಲೀನ ಬಾಳಿಕೆ ಸಹ ನೀಡಲಿದೆ. ಅಲ್ಲದೆ ಆಪಲ್ ಮತ್ತು ಆಂಡ್ರಾಯ್ಡ್ ಸೇವೆ ಮೂಲಕ ರಿಮೋಟ್ ಕಂಟ್ರೋಲ್ ಸೇವೆ ನೀಡುವಂತಹ ಗ್ರಂಡ್ಫೋಸ್ ಜಿಒ ಟೂಲ್ಕಿಟ್ ಗ್ರಾಹಕ ಸ್ನೇಹಿಯಾಗಿದೆ.

ಮಾಹಿತಿಗೆ: 9600063482/ 9003038808

## ಮಡ್ ಫೇಸ್ ಪ್ಯಾಕ್




ಸ್ವಚ್ಛ ಮತ್ತು ಮೃದು ಚರ್ಮಕ್ಕಾಗಿ ಹಿಮಾಲಯ ಆಯಿಲ್ ಕ್ಲಿಯರ್ ಮಡ್ ಫೇಸ್ ಪ್ಯಾಕ್ ಎಂಬ ಹೊಸ ಉತ್ಪನ್ನವನ್ನು ಹೊರತಂದಿದೆ.

ನೈಸರ್ಗಿಕ ಮತ್ತು ಸುಂದರವಾದ ತ್ವಚೆಯನ್ನು ಹೊಂದುವುದಕ್ಕಾಗಿಯೇ ಕಂಪನಿಯು ಈ ಆಯಿಲ್ ಕ್ಲಿಯರ್ ಮಡ್ ಫೇಸ್ ಪ್ಯಾಕ್ ಅನ್ನು ಗ್ರಾಹಕರಿಗೆ ಪರಿಚಯಿಸಿದೆ ಎನ್ನುವುದು ಕಂಪೆನಿ ಮಾತು.

ಮುಖದ ಕಾಂತಿಯನ್ನು ಮತ್ತಷ್ಟು ಮೃದುವಾಗಿ ಮತ್ತು ಯಾವುದೇ ತೆರನಾದ ಬಾಹ್ಯ ಕೊಳೆಗಳಿಂದ ಮುಕ್ತವಾಗಿ ಇಡಲು ಹಾಗೂ ಆಯಿಲ್ ಸ್ಕಿನ್ ಉಳ್ಳವರಿಗೆ ಇದು ಸೂಕ್ತವಾದ ಫೇಸ್ ಪ್ಯಾಕ್ ಆಗಿದೆ. ಅಲ್ಲದೆ ಇದರಲ್ಲಿ ಮಿನರಲ್ ಕ್ಲೇ ಮತ್ತು ವಾಲ್ನಟ್ ಇರುವುದರಿಂದ ಚರ್ಮದ ಕಾಂತಿ ಇಮ್ಮಡಿಯಾಗಲಿದೆ ಎನ್ನುತ್ತದೆ ಕಂಪೆನಿ.

100 ಗ್ರಾಂನ ಪ್ಯಾಕ್‌ಗೆ ರೂ 130. ಎಲ್ಲಾ ಪ್ರಮುಖ ಮಳಿಗೆ ಮತ್ತು ಹಿಮಾಲಯದ ಮಳಿಗೆಗಳಲ್ಲಿ ಲಭ್ಯ.

ಮಾಹಿತಿಗೆ 080 – 25200507




## ಲೋಟಸ್ ಮೇಕಪ್ ಇಕೋಸ್ಟೇ

ದೀರ್ಘಕಾಲ ಉಳಿಯುವ ಇಕೋಸ್ಟೇ ಮೇಕಪ್ ಅನ್ನು ಹೊಸದಾಗಿ ಲೋಟಸ್ ಕಂಪೆನಿ ಬಿಡುಗಡೆ ಮಾಡಿದೆ. ಇದು ಶೇ.100ರಷ್ಟು ಸಸ್ಯಜನ್ಯವಾಗಿದ್ದು, ಯಾವುದೇ ಹಾನಿಕಾರಕ ರಾಸಾಯನಿಕ ಅಥವಾ ಸಂರಕ್ಷಕಗಳನ್ನು ಬಳಸಲಾಗಿಲ್ಲ. ಹೀಗಾಗಿ ಅಲರ್ಜಿ ಆಗುವ ಸಂಭವ ಕಡಿಮೆ ಎನ್ನುವುದು ಕಂಪೆನಿ ವಿವರಣೆ. ಇದರಲ್ಲಿ ಲಿಕ್ವಿಡ್ ಫೌಂಡೇಷನ್, ಕಾಂಪ್ಯಾಕ್ಟ್, ಐಶ್ಯಾಡೊ, ಬ್ಲಷರ್, ಮಸ್ಕರಾ, ಲಿಪ್‌ಕಲರ್, ಹೈ ಶೈನ್ ಲಿಪ್‌ಗ್ಲೋಸ್ ಮುಂತಾದ ವೈವಿಧ್ಯಗಳಿವೆ. ಆಕರ್ಷಕ ಬಣ್ಣಗಳಲ್ಲಿ ಲಭ್ಯ. ಬೆಲೆ 425 ರೂಪಾಯಿಗಳಿಂದ ಆರಂಭ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ವಿವರಕ್ಕೆ: 93424 83454




## ಹೊಸ ಪ್ಯಾನಸೋನಿಕ್ ಫೋನ್

ಪ್ಯಾನಸೋನಿಕ್ ಇಂಡಿಯಾ ಲಿ.ಕಂಪೆನಿ ಎರಡು ಹೊಸ ಬಗೆಯ ಫೀಚರ್ ಫೋನ್‌ಗಳನ್ನು ಮಾರುಕಟ್ಟೆಗೆ ತಂದಿದೆ. 2.4 ಇಂಚು ಡಿಸ್‌ಪ್ಲೇ ಇದ್ದು, ಇದರ ಮಲ್ಟಿಮೀಡಿಯ ಸಾಮರ್ಥ್ಯ ಹೆಚ್ಚಿನ ಆಯ್ಕೆಗಳನ್ನು ಒಳಗೊಂಡಿದೆ. ಮೆಮೊರಿ ಕಾರ್ಡ್‌ನಲ್ಲಿ 16 ಜಿಬಿ ತನಕ ದಾಖಲೆಗಳನ್ನು ಸಂಗ್ರಹಿಸಿಡಬಹುದು. ಇಝುಡ್ 240 ಮಾದರಿಯ ಫೋನ್‌ನಲ್ಲಿ ಎಫ್‌ಎಂ ರೆಕಾರ್ಡಿಂಗ್, ಎಫ್‌ಎಂ ಅಲಾರಾಂ, 1.3 ಬ್ಯಾಕ್ ಕ್ಯಾಮೆರಾ, ಜಿಪಿಆರ್‌ಎಸ್ ಬೆಂಬಲ, ಬ್ಲೂಟೂತ್, ಮೊಬ್‌ಐಲ್ ಟ್ರ್ಯಾಕರ್, ಲೆಡ್ ಟಾರ್ಚ್‌ಲೈಟ್ ಇದೆ. ಬೆಲೆ 1790 ರೂಪಾಯಿ. ಪ್ಯಾನಸೋನಿಕ್ ಇಝುಡ್180 ಮಾದರಿ 1.8 ಇಂಚು ಡಿಸ್‌ಪ್ಲೇ ಇದ್ದು ಎಲ್ಲ ಸೌಲಭ್ಯಗಳನ್ನು ಹೊಂದಿದೆ. ಬೆಲೆ 1,350 ರೂಪಾಯಿ.

ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ಮಾಹಿತಿಗೆ: 9886195494